ಶ್ರೀ ಎಂ. ವೀರಪ್ಪ ಮೊಯಿಲಿ:- ೧೯೯೦ರಲ್ಲಿ ನಡೆದ ಪ್ರಕರಣಗಳು ೨೯: ೧೯೯೧ರಲ್ಲಿ ೫೩: ೧೯೯೨ರಲ್ಲಿ ೪೮: ಪತ್ತೆಯಾದ ಪ್ರಕರಣಗಳು ೧೯೯೦ರಲ್ಲಿ ೧೦, ೧೯೯೧ರಲ್ಲಿ ೨೧, ೧೯೯೨ರಲ್ಲಿ ೮. ಶಿಕ್ಷೆಯಾದಂಥ ಪ್ರಕರಣಗಳ ಅಂಕಿಸಂಖ್ಯೆಗಳು ನನ್ನ ಹತ್ತಿರ ಇಲ್ಲ.

ಶ್ರೀ ಎಂ.ವಿ. ವೆಂಕಟಪ್ಪ:- ಈ ದರೋಡೆಗಳಲ್ಲಿ whether they are professionals? What is the modus. operandi of those people? ಇವರು ಪ್ರೊಫೆಶನಲ್ಸ್, ನಿರುದ್ಯೋಗಿಗಳೆ ಮತ್ತು ಅವರಲ್ಲಿ ಯಾವ ರಾಜ್ಯದವರು ಹೆಚ್ಚಾಗಿದ್ದಾರೆ?

ಶ್ರೀ ಎಂ. ವೀರಪ್ಪ ಮೊಯಿಲಿ:- ಇದು ಒಂದೊಂದು ಪ್ರಕರಣಕ್ಕೆ ಹೊಂದಿಕೊಂಡಿರುತ್ತದೆ. ತಾವು ಸ್ಪಷ್ಟವಾದಂಥ ಪ್ರಕರಣದ ಬಿವರ ಕೇಳಿದರೆ ಅವರು ಪ್ರೊಫೆಶನಲ್ಸ್ ಅಥವಾ ಬೇರೆ ಯಾರು ಎಂದು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ:- ರಾತ್ರಿ ವೇಳೆ ಬಸ್ಸುಗಳನ್ನು ನಡೆಸುವಾಗ ಈ ಸಮಸ್ಯೆ ಬರುತ್ತದೆ either private or KSRTC. ಒಂದುವೇಳೆ ಡ್ರೈವರುಗಳು ಮತ್ತು ಕಂಡಕ್ಟರುಗಳು ರಿವಾಲ್ವರ್ ಲೈಸೆನ್ಸ್‌ಗೆ ಅರ್ಜಿ ಹಾಕಿದರೆ ಸರ್ಕಾರದವರು ಕೊಡುತ್ತಾರೆಯೆ? ಅವುಗಳನ್ನಾದರೂ ಕೊಟ್ಟರೆ ದರೋಡೆಕೋರರು ಭಯದಿಂದಾದರೂ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಸದಸ್ಯರ ಸಲಹೆ ಏನಿದೆ, ಅದನ್ನು ನಾನು ವಿಚಾರ ಮಾಡುತ್ತೇನೆ.

ಅಧ್ಯಕ್ಷರು:- ಷಫಿ ಅಹಮದ್‌ರವರೇ, ನಿಮ್ಮ ೧೬೧ನೇ ಪ್ರಶ್ನೆಗೆ ಹದಿನೈದು ದಿವಸ ಟೈಮ್ ಬೇಕು ಎಂದು ಹೇಳಿದ್ದಾರೆ.

ವಿಷಯ:- ಚಿಕ್ಕೋಡಿ ತಾಲ್ಲೂಕಿನಲ್ಲಿ ಕೆ.ಎಸ್.ಆರ್.ಟಿ.ಸಿ. ವಿಭಾಗ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧೧: (೨೨೫)
ಶ್ರೀ ಎಸ್. ಎಸ್. ಭೀಮಣ್ಣನವರ್ (ಚಿಕ್ಕೋಡಿ)
ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗವನ್ನು ತೆರೆಯಬೇಕೆಂಬ ಬೇಡಿಕೆ ಸರ್ಕಾರದ ಮುಂದಿದೆಯೆ?

ಆ) ಹಾಗಿಲ್ಲದಿದ್ದಲ್ಲಿ, ಗಡಿ ಪ್ರದೇಶಾಭಿವೃದ್ಧಿಯ ದೃಷ್ಟಿಯಿಂದ ಮೇಲ್ಕಂಡ ಸಂಸ್ಥೆಯ ವಿಭಾಗವನ್ನು ಸದರಿ ಪಟ್ಟಣದಲ್ಲಿ ತೆರೆಯಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಭೀಮಣ್ಣ ಖಂಡ್ರೆ
(ಸಾರಿಗೆ ಸಚಿವರು)

ಇಲ್ಲ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಈಗಾಗಲೇ ಜಿಲ್ಲಾ ಕೇಂದ್ರವಾದ ಬೆಳಗಾವಿಯಲ್ಲಿ ವಿಭಾಗೀಯ ಕಛೇರಿಯನ್ನು ಸ್ಥಾಪಿಸಿದೆ. ಪ್ರಸ್ತುತ ಈ ಜಿಲ್ಲೆಯಲ್ಲಿ ಮತ್ತೊಂದು ವಿಭಾಗೀಯ ಕಛೇರಿಯನ್ನು ತೆರೆಯುವ ಅವಶ್ಯಕತೆ ಉದ್ಭವಿಸುವುದಿಲ್ಲ.

ಶ್ರೀ ಎಸ್.ಎಸ್. ಭೀಮಣ್ಣನವರ್:- ಮಾನ್ಯ ಅಧ್ಯಕ್ಷರೆ ಚಿಕ್ಕೋಡಿ ಗಡಿನಾಡಿನಲ್ಲಿದ್ದು ಚಿಕ್ಕೋಡಿಯಿಂದ ಮಹಾರಾಷ್ಟ್ರಕ್ಕೆ ಮತ್ತು ಬೇರೆ ಬೇರೆ ರಾಜ್ಯಗಳಿಗೆ ಅನೇಕ ಬಸ್ಸುಗಳನ್ನು ಓಡಾಡುತ್ತಿದ್ದು ಚಿಕ್ಕೋಡಿ ದೊಡ್ಡ ತಾಲ್ಲೂಕು ಇದ್ದು, ಅಲ್ಲಿ ವಿಭಾಗೀಯ ಘಟಕವನ್ನು ತೆಗೆಯುವುದಕ್ಕೆ ಏನು ಅಡಚಣೆ ಇದೆಯೆಂದು ಸಾರಿಗೆ ಮಂತ್ರಿಗಳನ್ನು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ:- ಈ ಚಿಕ್ಕೋಡಿ ಗ್ರಾಮದ ಜನಸಂಖ್ಯೆ ೨೭,೨೭೩. ಬೆಳಗಾವಿಯಲ್ಲಿ ೮ ಡಿಪೋಗಳಿವೆ. ಅವುಗಳಲ್ಲಿ ಚಿಕ್ಕೋಡಿಯಲ್ಲೂ ಒಂದು ಡಿಪೋ ಇದೆ. ಇದೇ ಏರಿಯಾದಲ್ಲಿ ನಿಪ್ಪಾಣಿ ಮತ್ತು ಸಂಕೇಶ್ವರದಲ್ಲಿ ಎರಡು ಸ್ಥಳದಲ್ಲಿದೆ. ಇವುಗಳಲ್ಲಿ ಷೆಡ್ಯೂಲ್ಸ್ ಏನಿದೆ ಎಂದರೆ, ಚಿಕ್ಕೋಡಿಯಲ್ಲಿ ೮೫, ನಿಪ್ಪಾಣಿ ೫೩ ಮತ್ತು ಸಂಕೇಶ್ವರ ೨೨. ಇಷ್ಟು ಇದ್ದು ಅಲ್ಲಿ ಎಲ್ಲ ಸೌಲಭ್ಯಗಳೂ ಇವೆ. ಆದ್ದರಿಂದ ಮತ್ತೊಂದು ಡಿವಿಜನ್ ಬೇಕಾಗಿಲ್ಲ. ೧೯ ಡಿವಿಜನ್‌ಗಳ ಪೈಕಿ ಪ್ರತಿಯೊಂದು ಡಿವಿಜನ್‌ನಲ್ಲಿ ೫೦೦ ರಿಂದ ೬೦೦ ಶೆಡ್ಯೂಲ್‌ಗಳು ಇವೆ. ಅಲ್ಲಿ ಮಾತ್ರ ಡಿವಿಜನ್ ಪ್ರಾರಂಭ ಮಾಡಿದ್ದೇವೆ. ಅಲ್ಲದೆ ಬಾರ್ಡರ್ ಏರಿಯಾದಲ್ಲಿ ಪಬ್ಲಿಕ್ ಸಲುವಾಗಿ Karnataka and Maharastra have entered into a transport agreement, published in Karnataka Gazette dtd.13.4.92-143 routes by Karnataka, 241 routes by Maharastra and jointly on 130 routes. ಈ ಪ್ರಕಾರವಾಗಿ ಇರುವಾಗ ಬೇರೆ ಫೆಸಿಲಿಟೀಸ್ ಬೇಕಾಗಿಲ್ಲ. ಇಲ್ಲಿ ಡಿವಿಜನ್ ಮಾಡುವ ಅವಶ್ಯಕತೆ ಇಲ್ಲ.

ಶ್ರೀ ಎಸ್.ಎಸ್. ಭೀಮಣ್ಣನವರು:- ಇನ್ನುಮುಂದಾದರೂ ಒಂದು ಘಟಕವನ್ನು ತೆಗೆಯಬೇಕಾದರೆ ಚಿಕ್ಕೋಡಿಯನ್ನು ಕನ್ಸಿಡರ್ ಮಾಡುತ್ತೀರಾ ಎಂದು ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ:- ಮತ್ತೊಮ್ಮೆ ಹೇಳಿ.

ಶ್ರೀ ಎಸ್.ಎಸ್. ಭೀಮಣ್ಣನವರ್:- ಇನ್ನೊಂದು ಘಟಕ ತೆಗೆಯಬೇಕಾದರೆ ಚಿಕ್ಕೋಡಿಯ ವಿಷಯ ಸರ್ಕಾರದ ತಲೆಯೊಳಗೆ ಇರುತ್ತದೆಯೊ ಎಂದು ಕೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ:- ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ.

ಅಧ್ಯಕ್ಷರು:- ಬಸವರಾಜ ರಾಯರೆಡ್ಡಿಯವರೆ, ನಿಮ್ಮ ಪ್ರಶ್ನೆಗೆ ಹದಿನೈದು ದಿವಸ ಟೈಮ್ ಬೇಕು.

ಶ್ರೀ ಬಸವರಾಜ ರಾಯರೆಡ್ಡಿ:- ಇದು ಬಹಳ ಪ್ರಮುಖವಾದ ಪ್ರಶ್ನೆ.

ಅಧ್ಯಕ್ಷರು:- ಸರಿಯಾದ ಉತ್ತರ ಕೊಡಬೇಕಾದರೆ ಸಮಯ ಬೇಕಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ಸಮಯ ತೆಗೆದುಕೊಳ್ಳಿ, ಬೇಡವೆಂದು ಹೇಳುವುದಿಲ್ಲ. ಆದರೆ ಆದಷ್ಟು ಬೇಗ ಇದಕ್ಕೆ ಉತ್ತರ ಕೊಡಬೇಕು, ಏಕೆಂದರೆ ಪತ್ರಿಕೆಯಲ್ಲಿ ಕೆಲವು ಮಂತ್ರಿ ಮಂಡಲದ ಸದಸ್ಯರ ಮೇಲೆ ಮೊಕದ್ದಮೆಗಳು ಇವೆ, ಕ್ರಿಮಿನಲ್ ಕೇಸು ಇದೆಯೆಂದು ಬಂದಿದೆ. ಅಫಿಶಿಯಲ್ ಸ್ಪೋಕ್ಸ್‌ಮನ್ ಇಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಈ ಸಂಬಂಧವಾಗಿ ಒಂದು ನಿರ್ದಿಷ್ಟವಾದ ಪ್ರಶ್ನೆ ಬಂದಿದೆ. ಹಾಗಾಗಿ ಉತ್ತರವನ್ನು ಆದಷ್ಟು ಬೇಗ ಕೊಡಬೇಕು. ಈ ಭರವಸೆಯನ್ನು ಮುಖ್ಯಮಂತ್ರಿಗಳು ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಈಗಾಗಲೇ ಎಂ.ಎಲ್.ಎ.ಗಳ ವಿವರ ಬಂದಿದೆ. ಎಂ.ಎಲ್.ಸಿ. ವಿವರ ಕೆಲವು ಬರಬೇಕು. ಇನ್ನು ನಾಲ್ಕೈದು ದಿನಗಳಲ್ಲಿ ಅದು ಬರುತ್ತದೆ. ಬರುವ ವಾರ ಉತ್ತರ ಕೊಡುತ್ತೇನೆ.

ವಿಷಯ:- ಸುಬ್ರಹ್ಮಣ್ಯನಗರ ಮಹಾಲಕ್ಷ್ಮಿ ಬಡಾವಣೆಗಳಲ್ಲಿ ಆರಕ್ಷಕ ಠಾಣೆಗಳ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧೩:- (೧೮೨)
ಶ್ರೀ ಲಕ್ಕಣ್ಣ (ರಾಜಾಜಿನಗರ)
ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?